doc-529
T.P-2

Reg No B C 155 19-8-72

55th Year of Publication ‘Satyavadi’ daily, Mysore 4

In State - The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದೇಶದಲ್ಲಿ ಅಭಾವ ಎದುರಿಸಲು ಕ್ರಮ

ಸ್ವಾತಂತ್ರ್ಯದ ರಜತೋತ್ಸವದ ಸಮಯದಲ್ಲಿ

ಭಾರತೀಯರೆಂದೂ ಬಂಧನವನ್ನು ಬಯಸುವವರಲ್ಲ; ಸ್ವಾತಂತ್ರ್ಯಕ್ಕಾಗಿ ಸರ್ವಸ್ವಾರ್ಪಣೆ ಮಾಡಲು ಸದಾ ಸಿದ್ಧರು. ತಂತ್ರಶಾಲಿ ಬ್ರಿಟಿಷರು ತಮ್ಮ ಬೂಟುಗಾಲಲ್ಲಿ ಭದ್ರವಾಗಿರಬೇಕೆಂದು ಹಲವಾರು ಆಟ ಬೀರಿದರು; ದೇಶಭಕ್ತ ಭಾರತೀಯರು ಅದಕ್ಕೆ ಮೋಸಹೋಗಲಿಲ್ಲ : ಅವರ ತಂತ್ರ ಎದುರಿಸಿ, ಸ್ವಾತಂತ್ರ್ಯಕ್ಕಾಗಿ ಮುಂದೆಬಂದರು; ಅದು 1857 ರಲ್ಲಿರಬಹುದು : ಅದೇ ವಿಷಯ 1947 ಕ್ಕೂ ಅನ್ವಯಿಸುತ್ತದೆ.

ಸ್ವಾತಂತ್ರ್ಯಕ್ಕಿಂತಲೂ ಗೋಸಂರಕ್ಷಣೆ, ಗೋಹತ್ಯೆ ಪ್ರತಿಬಂಧಕವೇ ತಮಗೆ ಮುಖ್ಯವೆಂದಿರುವರು ಗಾಂಧಿ ಮಹಾತ್ಮ.

ರಾಮಕೃಷ್ಣ ಪರಮಹಂಸರು, ಸ್ವಾಮಿ ದಯಾನಂದರು, ಶ್ರದ್ಧಾನಂದರು, ಪಂಡಿತ ಮದನಮೋಹನ ಮಾಳವೀಯರು ಲೋಕಮಾನ್ಯ ಬಾಲ ಗಂಗಾಧರ ತಿಲಕರು ಪರಮಪೂಜನೀಯ ಡಾ|| ಕೇಶವ ಬಲರಾಂ ಹೆಗ್ಡೇವಾರರು.....ಮುಂತಾದವರು ಗೋಹತ್ಯೆ ನಿಷೇಧಕ್ಕಾಗಿ ಪ್ರಯತ್ನಿಸಿರುವರುನೇ ಅಲ್ಲದೆ, ಶೂಖಾಗಳು ಬ್ರಿಟಿಷರನ್ನೋಡಿಸಲು ಖಡ್ಗಧಾರಿಗಳಾದದ್ದೂ ಇದಕ್ಕೇನೇ.

ಬೆಳ್ಳಿ ಹಬ್ಬದ ಸಮಯದಲ್ಲಿ ಖೈದಿಗಳ ಬಿಡುಗಡೆ, ಅವರ ಶಿಕ್ಷಾವಧಿ ಕಡಮೆಗೊಳಿಸುವ ಮರಣದಂಡನೆಗೆ ಗುರಿಯಾಗಿರುವವರಿಗೆ ಕ್ಷಮಾದಾನದ ಶಾಂತಿಪ್ರಿಯತೆ ಮತ್ತು ಉದಾರತೆ ಪ್ರಕಟಿಸುವ ಯೋಜನೆಯೂ ಇರುವಾಗ, ಗೋವಾತೆಯ ಮೇಲೂ ಕರುಣೆ ತೋರಿಸಿ, ಅದರ ಹತ್ಯೆ ಕೂಡಲೇ ನಿಲ್ಲುವಂತಾಗಲಿ.

ಭಾರತೀಯರೆಲ್ಲರೂ ಈ ಉತ್ಸವ ಕಾಲದಲ್ಲಿ ಗೋವಧೆ ಪ್ರತಿಬಂಧಿಸುವ ಕಾನೂನು ಎಲ್ಲಾ ಕಡೆಗಳಲ್ಲೂ ಜಾರಿಗೆ ಬರುವಂತಾಗಲೆಂದು ಪ್ರಯತ್ನಿಸುವುದು ಅವರ ಕರ್ತವ್ಯವೇ ಸರಿ — ಶಿವಶಂಕರ

ಅಪಾರ ಧಾನ್ಯ ನಷ

ದಾವಣಗೆರೆ— ವರ್ತಕರಿಂದ ರೂ 6.5 ಲಕ್ಷ ಬೆಲೆಯ ಡಿಕ್ಲೇರು ಮಾಡದಿದ್ದ ಭತ್ತ, ಅಕ್ಕಿ, ಜೋಳದ 10000 ಮೂಟೆಗಳನ್ನು ಜಿಲ್ಲಾಧಿಕಾರಿ ಶ್ರೀ ಫಿಲಿಪೋಸ್ ಮಾಥ್ಯಾ ರವರು ವಶಪಡಿಸಿಕೊಂಡು, ಮುಂದಿನ ಆರ್ಡರು ಕೊಡುವವರೆಗೆ, ಡಿಕ್ಲೇರು ಮಾಡಿರುವ ಧಾನ್ಯಗಳನ್ನೂ ಮಾರಕೂಡದೆಂದು ವರ್ತಕರಿಗೆ ಸೂಚನೆ ಕೊಟ್ಟಿರುವರು.

★

ಹೊಡೆದಾಟ

ಮೈಸೂರು— ಮಹಾರಾಜಾ ಕಾಲೇಜು ಹಾಸ್ಟಲ್ಲಿನ ವಿದ್ಯಾರ್ಥಿಗಳ ತಂಡವು ಕಬ್ಬಳ್ಳಿ ಹಾಸ್ಟಲು ವಿದ್ಯಾರ್ಥಿಗಳನ್ನು ಹೊಡೆದು, ಕೆಲವು ಪದಾರ್ಥಗಳನ್ನು ಡ್ಯಾಮೇಜು ಮಾಡಿದರು — ಒಬ್ಬ ವಿದ್ಯಾರ್ಥಿ ಬಂಧಿಸಲ್ಪಟ್ಟನು.

○

ಭಾರತದ ವಿಸ್ತೀರ್ಣ

ನವದೆಹಲಿ— ಭಾರತದ ವಿಸ್ತೀರ್ಣ ಈಗ 3280483 ಚದುರ ಕೆಎಂ ಇರುವದೆಂದೂ, 1957 ರಲ್ಲಿ 3280004 ಎಂದು ಅಂದಾಜುಮಾಡಲಾಗಿತ್ತೆಂದೂ ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ವರಹಾ ವಿದ್ಯುತ್ ಪ್ರಾಜೆಕ್ಟ್

ಬೆಂಗಳೂರು — 26 ಲಕ್ಷ ಕಿವಾಟ್ ವಿದ್ಯುತ್ ಉತ್ಪಾದನಾ ಶಕ್ತಿಯ ಯೋಜಿಸಲಾಗಿರುವ ರೂ 46 ಕೋಟಿ ಖರ್ಚಿನ ವರಾಹಾ ಹೈಡ್ರೋ-ಎಲೆಕ್ಟ್ರಿಕ್ ಪ್ರಾಜೆಕ್ಟ್ ಸಂಬಂಧದ ವರದಿಯನ್ನು ಕೇಂದ್ರ ಸರಕಾರಕ್ಕೆ ಕಳಿಸಲಾಗಿದೆ ಎಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

★

ದಿವ್ಯವಾಣಿ

ಸ್ವಾತಂತ್ರ್ಯವು ಸಾಂಕ್ರಾಮಿಕವು.
— ಹರ್ ಹಬೆ

ಬೊಂಬಾಯಿ ಬಂದ್ ಯೋಚನೆ !

ಬೊಂಬಾಯಿ:— ಇಲ್ಲಿಯ ಪೌರಾಡಳಿತದ ನೌಕರರ ಮತ್ತು ಸಾರಿಗೆ ಕಾರ್ಮಿಕರ ಮುಷ್ಕರ ಪರಿಸ್ಥಿತಿಯಲ್ಲಿ ಬದಲಾವಣೆಯಿಲ್ಲದಿದ್ದು, ಅವರ ಬೆಂಬಲಕ್ಕೆ ಬೊಂಬಾಯಿ ಬಂದ್ ನಡೆಸಲು ಕೆಲವು ಕೇಂದ್ರ ಟ್ರೇಡ್ ಯೂನಿಯನ್ ಪ್ರತಿನಿಧಿಗಳು ಯೋಚಿಸುತ್ತಿರುವದಾಗಿ ವರದಿಯಾಗಿದೆ.

★

ಅಮೇರಿಕಾ ಆಯುಧಗಳು

ನವದೆಹಲಿ— ಅಮೇರಿಕವು ಪಾಕಿಸ್ತಾನಕ್ಕೆ ಆಯುಧ ಸರಬರಾಜು ಮಾಡುವುದಿಲ್ಲವೆಂಬ ಸ್ಪಷ್ಟ ಭರವಸೆಯನ್ನು ಭಾರತ ಪಡೆದಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

ಅನಾವೃಷ್ಟಿ ಎದುರಿಸಲು ತೀವ್ರ ಕ್ರಮ

ಬೆಂಗಳೂರು— ರಾಜ್ಯದಲ್ಲಿಯ ಅತೀ ತೀವ್ರ ಸಂಕಷ್ಟಗಳನ್ನು ಎದುರಿಸಲು ಸರಕಾರವು ರೂ 16.50 ಕೋಟಿಯ ವ್ಯಾಪಕ ಪರಿಹಾರಕಾರ್ಯವನ್ನೂ, ರೂ 12 ಕೋಟಿಯ ಭಾರಿ ವ್ಯವಸಾಯ ಉತ್ಪಾದನಾ ಕಾರ್ಯಕ್ರಮವನ್ನೂ ಮತ್ತು ಹಶುವಿನಿಂದ ವರಣಗಳಾಗದಂತೆ ರಾಶಿ ಧಾನ್ಯಗಳ ಶೇಖರಣೆ ಕಾರ್ಯ ಕೈಗೊಂಡಿದೆ.

★

ಅನ್ನ ಸತ್ಯಾಗ್ರಹ

ರಾಯಚೂರು— ಊರಿನಲ್ಲಿ ಕುಡಿಯುವ ನೀರು ಸಾಲದಿರುವದನ್ನು ಪ್ರತಿಭಟಿಸಿ ಮೂರು-ಮೂಂದಿ ಗಣ್ಯರು ಮುನಿಸಿಪಾಲಿಕಟ್ಟಡದಲ್ಲಿ ಉಪವಾಸ ಕೈಗೊಂಡಿರುವರು

ವುಡ್‌ಲ್ಯಾಂಡ್ 18-8-72 ರಿಂದ ಅಮೋಘ 16ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜಿ ಎಂ ಸಹೋದರರು
ದಿನ 3 ಪ್ರದರ್ಶನಗಳು
ಬೆಳಗಿನ ಪ್ರದರ್ಶನ ಪ್ರತಿ ದಿನ 10-30
ಮಂತ್ರಾಲಯ ಮಹಾತ್ಮೆ ಅಥವಾ ರಾಘವೇಂದ್ರ ವಿಜಯ

ಅಪೆರಾ 2ನೇ ವಾರ

— ಅಭ್ಯುದಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

ಪ್ರತಿ ದಿನ 3 ಪ್ರದರ್ಶನಗಳು
ಪಾತ್ರ— ರಾಜ್‌ಕುಮಾರ್, ಹೇಮಾಮಾಲಿನಿ, ರಾಖಿ, ವಿನೋದ್ ಮೆಹ್ರಾ

ಕಳುವಾಗಿದ್ದ ವಿಗ್ರಹ

ಮದನಪಲ್ಲಿ— ಆಂಧ್ರಪ್ರದೇಶದ ಸೂಳೂರುಪೇಟೆಯ ಒಂದು ದೇವಾಲಯದಲ್ಲಿ ಕಳುವಾಗಿದ್ದ ಒಂದು ಪಂಚಲೋಹದ 'ಅಮ್ಮನ' ವಿಗ್ರಹವನ್ನು ಇಲ್ಲಿಯ ಪೋಲೀಸರು ವಶಪಡಿಸಿಕೊಂಡು ಇಬ್ಬರನ್ನು ದಸ್ತಗಿರಿ ಮಾಡಿದ್ದಾರೆ.

ಪ್ರಾದೇಶಿಕ ಭಾಷೆಗಳು

ನವದೆಹಲಿ— ರಾಜ್ಯ ಸರಕಾರಗಳು ಆಡಳಿತ ಭಾಷೆಯಾಗಿ ಇಂಗ್ಲೀಷಿನಿಂದ ತಮ್ಮತಮ್ಮ ಪ್ರಾದೇಶಿಕ ಭಾಷೆಗಳಿಗೆ ಬದಲಾಯಿಸಿಕೊಳ್ಳಬೇಕೆಂದು, ರಕ್ಷಣಾ ಮಂತ್ರಿ ಜಗಜೀವನರಾಂ ಹಿಂದೀ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು

ಔಷಧೋಪಚಾರ ಖರ್ಚು

ನವದೆಹಲಿ— ಸರಕಾರದ ಮಾಲೀಕತ್ವದ ಭಾರತದ ಎಣ್ಣೆ ಕಾರ್ಪೊರೇಷನ್ನಿನ ಮ್ಯಾನೇಜಿಂಗ್ ಡೈರೆಕ್ಟರು (ವಿಥಾರ್ಕೆಟಿಂಗ್) ಆ ಸಂಸ್ಥೆಗೆ ತಾನು ಕ್ಯಾನ್ಸರ್ ಚಿಕಿತ್ಸೆಗಾಗಿ ಭಾರತ ಮತ್ತು ವಿದೇಶಗಳಲ್ಲಿ ಔಷಧೋಪಚಾರಗಳಿಗಾಗಿ ರೂ. 114000 ಬಿಲ್ ಮಾಡಿರುವರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಜೇನುನೊಣಗಳ ಪಾಲನೆಯಿಂದ ಆರೋಗ್ಯ ಹೆಚ್ಚು

ಯೂಕ್ರೇನ್ (ಸೋವಿಯೆಟ್ ಸಂಘ) ನಿನ ಜೇನುನೊಣಗಳ ಪಾಲಕರ ಅಭಿಪ್ರಾಯದ ಪ್ರಕಾರ ಜೇನುತುಪ್ಪದ ಸೇವನೆ ಹಾಗೂ ಜೇನುನೊಣಗಳ ಕಡಿತದಿಂದ ಮನುಷ್ಯನ ಆರೋಗ್ಯ ಹೆಚ್ಚುತ್ತದೆ : ಅಲ್ಲಿನ ಜೇನುನೊಣಗಳ ಪಾಲಕರ ಹೇಳಿಕೆ ಪ್ರಕಾರ ಅವರು ಅನಾರೋಗ್ಯದಿಂದ ಎಂದೂ ನರಳಿಲ್ಲ ; 22 ಪಾಲಕರ ಪ್ರಕಾರ ಅವರ ಅವರಿಗಿದ್ದ ವಾತರೋಗವೂ ಪಾಸಿಯಾಯಿತು. [ಸೈಯಿಂಟಿಫಿಕ್ ಇಲ್ಲಸ್ಟ್ರೇಷನ್

SHAKTI SUDHA

A Superb Tonic

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

★

ಅ ನೆ - ಹು ಡು ಗ

Protect the Cow

Help The Gorakshana

— Humanitarian Propoganda Monthly ....

Contribute Liberally

to the National Defence Fund

For Mosquito Nets in all sizes Visit Bank Road Bahusar, Mysore